ಏನು ಮಾತನಾಡಬೇಕೋ ಅದನ್ನು ಮಾತನಾಡಿ, ಅವಕಾಶ ಮಾಡಿಕೊಡುತ್ತೇನೆ. ಈಗ ದಯಮಾಡಿ ಸಹಕರಿಸಿ. ಮೊದಲು ಪ್ರಶ್ನೋತ್ತರ ಮುಗಿಸಿಬಿಡೋಣ.

(ಗೊಂದಲ)

ಅಧ್ಯಕ್ಷರು:– ಆಯಿತು. ಪ್ರಶ್ನೋತ್ತರ ಆದ ಮೇಲೆಯೇ ಇದನ್ನು ತೆಗೆದು ಕೊಳ್ಳೋಣ ಬಿಡಿ. ಅದರ ನಂತರವೇ ಶೂನ್ಯ ವೇಳೆ ತೆಗೆದುಕೊಂಡರಾಯಿತು. ಈಗ ಮಾನ್ಯ ಬಾಲರಾಜ್‌ರವರೆ, ತಮ್ಮ ಪ್ರಶ್ನೆ ಕೇಳಿ.

1.	ಚುಕ್ಕ ಗುರುತಿನ ಪ್ರಶ್ನೆ ಸಂಖ್ಯೆ:	3756
2.	ಸದಸ್ಯರ ಹೆಸರು:	ಶ್ರೀ ಬಾಲರಾಜ್.ಎಸ್. – ಕೊಳ್ಳೇಗಾಲ
3.	ವಿಷಯ:	ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ನಡೆಯುತ್ತಿರುವ ಅನ್ಯಾಯ.
4.	ಉತ್ತರಿಸುವವರು:	ರೇಷ್ಮೆ ಸಚಿವರು ಶ್ರೀ ಕೆ.ಚೆನ್ನಿಗಪ್ಪ
	ಪ್ರಶ್ನೆಗಳು	**ಉತ್ತರಗಳು**
ಅ.	ಮುಡಿಗುಂಡಂ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೈತರಿಗೆ ಹಾಗೂ ನಿಜವಾದ ರೀಲರ್‌ಗಳಿಗೆ ಅನ್ಯಾಯ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಮುಡಿಗುಂಡಂ ರೇಷ್ಮೆ, ಗೂಡಿನ ಮಾರುಕಟ್ಟೆಯಲ್ಲಿ ರೈತರಿಗೆ ಹಾಗೂ ನಿಜವಾದ ರೀಲರುಗಳಿಗೆ ಯಾವುದೇ ಅನ್ಯಾಯವಾಗಿರುವುದಿಲ್ಲ. ಆದಾಗ್ಯೂ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಈ ಮಾರುಕಟ್ಟೆಯಲ್ಲಿ ಒದಗಿಸಲಾಗಿದೆ.
ಆ.	ಬಂದಿದ್ದರೆ, ಅದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು:	1. ಕೇವಲ ರಹದಾರಿ/ ಗುರುತಿನ ಚೀಟಿ ಉಳ್ಳಂತಹ ವ್ಯಕ್ತಿಗಳು ಮರುಕಟ್ಟೆಯ

ಪ್ರಶ್ನೆಗಳು	ಉತ್ತರಗಳು
	ಒಳಗೆ ಪ್ರವೇಶಿಸುವಂತೆ ಕ್ರಮ ಜರುಗಿಸಿದೆ ಗೂಡು ಕಳ್ಳತನ ಆಗದಂತೆ ನಿಯಂತ್ರಿಸಲಾಗುತ್ತಿದೆ. 2. ರೈತರಿಗೆ ತಮ್ಮ ಗೂಡನ್ನು ಹರಡಿಸಲು ಜಾಲರಿಗಳನ್ನು ಹಾಗೂ ತೂಕ ಮಾಡಲು ಅನುಕೂಲವಾಗುವಂತೆ ಪ್ಲಾಸ್ಟಿಕ್ ಬುಟ್ಟಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸಲಾಗಿದೆ. 3. ನ್ಯಾಯಯುತ ತೂಕದ ಸಲುವಾಗಿ ಡಿಸ್‌ಪ್ಲೇ ಬೋರ್ಡ್‌ಗಳುಳ್ಳ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಒದಗಿಸಲಾಗಿದೆ. 4. ರೈತರಿಗೆ ತಾವು ಮಾರಿದ ಗೂಡುಗಳು ಮೌಲ್ಯವನ್ನು ಅಂದೇ ಪಾವತಿಸುವಂತೆ ಕ್ರಮ ಕೈಗೊಳ್ಳಲಾಗಿದೆ. 5. ರೈತರು ಹಾಗೂ ರೀಲರುಗಳ ಅವಶ್ಯಕತೆಗಳಿಗಾಗಿ ಕುಡಿಯುವ ನೀರು, ಶೌಚಾಲಯ ಹಾಗೂ ತಂಗಲು ಸ್ಥಳದ ವ್ಯವಸ್ಥೆ ಮಾಡಲಾಗಿದೆ. 6. ಗೂಡಿಗೆ ನ್ಯಾಯಯುತ ದರ ದೊರಕಲು ಅನುಕೂಲವಾಗುವಂತೆ ಬಹಿರಂಗ ಹರಾಜು ಮಾಡಲಾಗುತ್ತಿದೆ. 7. ಸ್ವಚ್ಛತೆ ಹಾಗೂ ಭದ್ರತೆ ಕಾಪಾಡಲು ವ್ಯವಸ್ಥೆ ಮಾಡಲಾಗಿದೆ.

ಪ್ರಶ್ನೆಗಳು	ಉತ್ತರಗಳು
	8. ಅವಶ್ಯ ಸಿಬ್ಬಂದಿಯನ್ನು ನೇಮಿಸುವ ದಲ್ಲದೇ, ನೌಕರರು ಶಿಸ್ತು ಪಾಲಿಸುವಂತೆ ಕ್ರಮ ಕೈಗೊಳ್ಳಲಾಗಿದೆ. ತಪ್ಪಿತಸ್ಥ ನೌಕರರ ಮೇಲೆ ಸೂಕ್ತ ಹಾಗೂ ಶೀಘ್ರ ಕ್ರಮ ಕೈಗೊಳ್ಳಲಾಗುತ್ತಿದೆ. 9. ಅವಶ್ಯ ಕಾಮಗಾರಿಗಳಿಗೆ ಅನುದಾನ ನೀಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳ ಲಾಗುತ್ತಿದೆ. 10. ಮಹಿಳೆಯರಿಗೆ ಹರಾಜು ಪ್ರಕ್ರಿಯೆಯಲ್ಲಿ ಆದ್ಯ ನೀಡಲಾಗುತ್ತಿದೆ ಹಾಗೂ ಅವ ರಿಗೆ ಪ್ರತ್ಯೇಕ ಸ್ಥಳಾವಕಾಶ ಕಲ್ಪಿಸಲಾಗಿದೆ.
ಇ. ಮಾರುಕಟ್ಟೆ ಮತ್ತು ಕಚೇರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕೆಲವು ಅಧಿಕಾರಿಗಳ ಬಗ್ಗೆ ದೂರುಗಳು ಬಂದಿದೆಯೋ	ಹೌದು.
ಈ. ಬಂದಿದ್ದರೆ ದೂರುಗಳಿಗೆ ಯಾವ ಕ್ರಮ ಗಳನ್ನು ಕೈಗೊಳ್ಳಲಾಗಿದೆ:	ಕೊಳ್ಳೇಗಾಲ ರೇಷ್ಮೆ ಗೂಡು ಮಾರುಕಟ್ಟೆ ಮತ್ತು ಇದರ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೂರು ಅಧಿಕಾರಿಗಳ ಮೇಲೆ ದೂರು ದಿನಾಂಕ 14–03–2005ರಂದು ಬಂದಿದೆ. ಜಂಟಿ ರೇಷ್ಮೆ ನಿರ್ದೇಶಕರು, ಮೈಸೂರು ಇವರ ಈ ದೂರಿನ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿದೆ.

ಪ್ರಶ್ನೆಗಳು	ಉತ್ತರಗಳು	
ಉ. ಮಾರುಕಟ್ಟೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ದರ್ಜೆವಾರು ನೌಕರರ ಸಂಖ್ಯೆ ಎಷ್ಟು?	1. ರೇಷ್ಮೆ ಉಪನಿರ್ದೇಶಕರು	–1
	2. ರೇಷ್ಮೆ ಸಹಾಯಕನಿರ್ದೇಶಕರು	–2
	3. ರೇಷ್ಮೆ ವಿಸ್ತರಣಾಧಿಕಾರಿ	– 1
	4. ಪತ್ರಾಂಕಿತ ವ್ಯವಸ್ಥಾಪಕರು II	– 1
	5. ಕಚೇರಿಯ ಅಧೀಕ್ಷಕರು	–1
	6. ಪ್ರಥಮ ದರ್ಜೆ ಸಹಾಯಕರು	–4
	7. ರೇಷ್ಮೆ ನಿರೀಕ್ಷಕರು	–6
	8. ರೇಷ್ಮೆ ಪ್ರದರ್ಶಕರು	–8
	9. ರೇಷ್ಮೆ ಪ್ರವರ್ತಕರು	–8
	10. ಅಟೆಂಡರ್	–2
	11. ಗ್ರೂಪ್.ಡಿ.	–9
	12. ದ್ವಿತೀಯ ದರ್ಜೆ ಸಹಾಯಕರು (ಸಂಖ್ಯಾತಿರಿಕ್ತ)	–2
	13. ರೇಷ್ಮೆ ಪ್ರವರ್ತಕರು (ಸಂಖ್ಯಾ ತಿರಿಕ)	–11
	14.ಗ್ರೂಪ್ ಡಿ.(ಸಂಖ್ಯಾತಿರಿಕ್ತ)	–6
	15.ದಿನಗೂಲಿ ನೌಕರರು	–2
	ಒಟ್ಟು	–64

ಪ್ರಶ್ನೆಗಳು	ಉತ್ತರಗಳು
ಊ.ಅನಧಿಕೃತ ರೀಲರ್‌ಗಳ ಪ್ರವೇಶ ನಿರ್ಬಂಧಕ್ಕೆ ತೆಗೆದುಕೊಂಡಿರುವ ಕ್ರಮ ಹಾಗೂ ಇದಕ್ಕೆ ಇರುವ ನಿಯಮಗಳ ವಿವರಗಳೇನು?	ಅಧಿಕೃತ ರಹದಾರಿ ಪಡೆದಿರುವ ರೀಲರ್‌ಗಳ ಮಾತ್ರ ಮಾರುಕಟ್ಟೆಗೆ ಪ್ರವೇಶಿಸಬಹುದು. ಇಂತಹ ರೀಲರುಗಳಿಗೆ ಗುರುತಿನ ಚೀಟಿ ನೀಡಲಾಗಿದೆ. ಮಾರುಕಟ್ಟೆ ಸಿಬ್ಬಂದಿ ಮಾರುಕಟ್ಟೆ ಪ್ರವೇಶಿಸುವ ಗೇಟಿನ ಬಳಿ ಗುರುತಿನ ಚೀಟಿಯನ್ನು ಪರಿಶೀಲಿಸುತ್ತಾರೆ ಗುರುತಿನ ಚೀಟಿ ಇಲ್ಲದವರನ್ನು ಮಾರುಕಟ್ಟೆ ಒಳಗೆ ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆ. ವಹಿವಾಟಿನಲ್ಲಿ ಭಾಗ ವಹಿಸಬೇಕಾದರೆ ರೀಲರ್‌ಗಳು ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಾವಳಿಗಳು 1960ರಂತೆ ಲೈಸೆನ್ಸ್ ಪಡೆದು ಪ್ರತಿ 3 ವರ್ಷಕ್ಕೊಮ್ಮೆ ನವೀಕರಿಸುತ್ತಿರಬೇಕು.

ಶ್ರೀ ಎಸ್.ಬಾಲರಾಜ್:– ಮಾನ್ಯ ಅಧ್ಯಕ್ಷರೆ , ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಅದರಲ್ಲಿ ಇದುವರೆಗೂ ಯಾವುದೇ ಸಮಸ್ಯೆಗಳಾಗಿಲ್ಲ, ಯಾವುದೇ ದೂರುಗಳು ದಾಖಲಾಗಿಲ್ಲ, ಎಲ್ಲವನ್ನೂ ಒದಗಿಸಲಾಗಿದೆ. ಎಲ್ಲಾ ರೀತಿಯ ಅನುಕೂಲ ಮಾಡಿಕೊಡಲಾಗಿದೆ ಅನ್ನತಕ್ಕಂಥ ಅಂಶಗಳನ್ನು ಮಾನ್ಯ ಸಚಿವರು ತಿಳಿಸಿದ್ದಾರೆ. ಆದರೆ ಆ ಮಾರ್ಕೆಟ್‌ನಲ್ಲಿ ನಡೆಯುತ್ತಿರತಕ್ಕಂಥ ಅನ್ಯಾಯ ಬಹುಶಃ ಕರ್ನಾಟಕ ರಾಜ್ಯದಲ್ಲಿ ಯಾವ ಮಾರ್ಕೆಟ್‌ನಲ್ಲೂ ಕೂಡ ನಡೆಯುತ್ತಿಲ್ಲ. ಕಾರಣ ವೆನೆಂದರೆ, ಗೂಂಡಾಗಿರಿ ಅಲ್ಲಿ ಜಾಸ್ತಿಯಾಗಿದೆ. ಒಂದು ಕೆ.ಜಿ. ಗೂಡಿನ ಬೆಲೆಯನ್ನು ನಿಗಧಿ ಮಾಡಬೇಕಾದರೆ, ಆ ಬಡ ರೈತನ ಕಷ್ಟ ಎಷ್ಟಿದೆ ಎಂದರೆ,

ಅಲ್ಲಿಗೆ ಹೋಗಿ ಅವನು, ಇದು ನನ್ನ ಗೂಡಿದು, ನನಗೆ ಇಂತಿಷ್ಟು ಹಣ ಕೊಡಬೇಕು ಅಥವಾ ಇದು ಇಂತಿಷ್ಟು ಬೆಲೆ ಬಾಳುತ್ತದೆ ಎಂದು ಹೇಳಿಕೊಳ್ಳುವುದಕ್ಕೆ, ಎಲ್ಲಾ ಶಕ್ತಿ ಇಲ್ಲ. ಅಕಸ್ಮಾತ್ ಹೆಚ್ಚುವರಿ ಹಣವನ್ನು ನೀಡತಕ್ಕಂಥ ಸಂದರ್ಭಗಳಲ್ಲೂ ಈ ಹಣವನ್ನು ಏಕೆ ನಿಡಬೇಕು? ಎಂದು ಕೇಳುತ್ತಾರೆ. ಒಂದು ಗೂಡನ್ನು ಎಸೆದು, ಈ ಗೂಡು ನನ್ನದು ಎಂದು ಒಬ್ಬ ಗೂಂಡಾಗಿರಿ ಮಾಡತಕ್ಕಂಥವನು ಹೇಳಿದರೆ. ಅದನ್ನು ಇನ್ನೊಬ್ಬರು ಪ್ರಶ್ನೆ ಮಾಡುವಂತಿಲ್ಲ, ಇನ್ನೊಬ್ಬ ಯಾರಾದರೂ ರೀಲರ್‌ಗಳು ಅದನ್ನು ತೆಗೆದು ಕೊಳ್ಳುವಂತಿಲ್ಲ. ಈ ವಾತಾವರಣ ಅಲ್ಲಿದೆ. ಇಂತಹ ಒಂದು ಉಸಿರು ಕಟ್ಟಿಸುವಂತಹ ವಾತಾವರಣದಲ್ಲಿ ರೈತರು ಅಲ್ಲಿ ತಮಗೆ ನ್ಯಾಯಯುತವಾದ ಬೆಲೆ ಸಿಗುತ್ತಿಲ್ಲ, ತಮಗೆ ಅನ್ಯಾಯವಾಗುತ್ತಿದೆ ಅನ್ನತಕ್ಕಂಥ ಅಂಶವನ್ನು ಪದೇ ಪದೇ ಸರ್ಕಾರದ ಗಮನಕ್ಕೂ ಮತ್ತು ಸಂಬಂಧಪಟ್ಟ ಎಲ್ಲರ ಗಮನಕ್ಕೂ ತಂದಿದ್ದಾರೆ. ಈ ಹಿಂದೆ ಕರ್ನಾಟಕ ರಾಜ್ಯದಲ್ಲಿ ನಮ್ಮ ಮುಡಿಗುಂಡಂ ಮಾರುಕಟ್ಟೆ ಎರಡನೇ ದೊಡ್ಡ ಮಾರುಕಟ್ಟೆಯಾಗಿತ್ತು. ಈಗ.....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆ ಇಷ್ಟೇ ನಮ್ಮ ಶಿಡ್ಲಘಟ್ಟ ಮಾರುಕಟ್ಟೆಯಲ್ಲೂ ಕೂಡ ನಮಗೆ ಇಂತಾದ್ದರ ಅನುಭವವಾಗಿದೆ. ರೈತರಿಗೆ ಮುಕ್ತವಾಗಿ ಅಲ್ಲಿ ಮಾರಾಟ ಮಾಡತಕ್ಕಂಥ ಅವಕಾಶ ಕೊಡುವುದಿಲ್ಲ. ರೀಲರ್‌ಗಳೆಲ್ಲಾ ಗ್ಯಾಂಗ್ ಆಗಿರುತ್ತಾರೆ. ಅವರು ಗ್ಯಾಂಗ್ ಆಗಿ ಮೊದಲೇ ಮಾತನಾಡಿಕೊಂಡು, ಅವರು ಏನು ರೇಟ್ ನಿಗಧಿ ಮಾಡಿಕೊಳ್ಳುತ್ತಾರೋ, ಆ ರೇಟ್‌ಗೇ ವಿಧಿ ಇಲ್ಲದಂತೆ ಮಾರುವಂತೆ ಮಾಡುತ್ತಾರೆ. ಅವರು ಎಂತಹ ಸ್ಥಿತಿ ನಿರ್ಮಾಣ ಮಾಡುತ್ತಾರೆ ಎಂದರೆ, ಗೂಡನ್ನು ಹಿಂದಿನ ದಿವಸ ರಾತ್ರಿ ತೆಗೆದುಕೊಂಡು ಬರುತ್ತಾರೆ. ಬೆಳಿಗ್ಗೆ ಅವರು ರೆಡಿ ಇರುತ್ತಾರೆ. ಮತ್ತೆ ಅವರು ಸಂಜೆ ಇವರಿಗೆಲ್ಲಾ ಹಣ ಕೊಟ್ಟು ದಳ್ಳಾಳಿಗಳೆಲ್ಲಾ ಬಂದು ತೂಕ ಹಾಕಿ, ಅಧಿಕಾರಿಗಳು ಬಂದು ಲೆಕ್ಕ ಹಾಕಿ, ಹಣ ಕೊಡುವಷ್ಟರಲ್ಲಿ ಮಾರನೆಯ ದಿವಸ ಸಂಜೆಯಾಗಿರುತ್ತದೆ. ಅಲ್ಲಿಯವರೆಗೂ ಅವರು ತಿಂಡಿ ತಿನ್ನಲ್ಲಿಕ್ಕೆ, ಕೂಡ ಹೋಗುವುದಿಲ್ಲ. ಏಕೆಂದರೆ ತಿಂಡಿ ತಿನ್ನಲಿಕ್ಕೆ ಹೋದರೆ, ಯಾವನಾದರೂ ಒಂದಷ್ಟು ಕಂಕುಳಲ್ಲಿ ಇಟ್ಟುಕೊಂಡು ಹೋಗಿ ಬಿಡುತ್ತಾನೆ. ಅದರ ಜೊತೆಗೆ ಈ ರೀಲರ್‌ಗಳು ಗ್ಯಾಂಗಪ್ ಆಗಿರುತ್ತಾರೆ. ಗ್ಯಾಂಗಪ್ ಆಗಿ, ಅವರದೇ ಒಂದು ಲಾಬಿ ಮಾಡಿಕೊಂಡು ಅವರೆ pre-determined rate ಗೆ ಬಂದಿರುತ್ತಾರೆ.

ಯಾವನಾದರೂ ರೈತ ಸ್ವಲ್ಪ ಏನಾದರೂ ಮಾತನಾಡಿದರೆ, ಅವನ ಮೇಲೆ ಗೂಂಡಾಗಿರಿ ನಡೆಸುತ್ತಾರೆ. ಅವನನ್ನು ಹೊಡೆಯುವುದು ಮಾಡುತ್ತಾರೆ. ಇಂತಹ ಒಂದು ಪರಿಸ್ಥಿತಿ ಇದೆ ರಾಜ್ಯದ ಎಲ್ಲಾ ಮಾರ್ಕೆಟ್‌ಗಳಲ್ಲಿದೆ. ನಿಮಗೆ ಗೊತ್ತಿದ್ದಂತೆ ಶಿಡ್ಲಘಟ್ಟ ಒಂದು ದೊಡ್ಡ ಮಾರ್ಕೆಟ್ ಆಗಿದೆ. ಹಲವಾರು ಸಾರಿ ಅಲ್ಲಿ ಗಲಾಟೆಯಾಗಿದೆ. ಲಾಠಿ ಚಾರ್ಜ್ ಆಗಿದೆ. ಅಂತಹದ್ದೇ ಪರಿಸ್ಥಿತಿ ನಮ್ಮಲ್ಲೂ ಇದೆ ಎಂದು ಮಾನ್ಯ ಬಾಲರಾಜ್‌ರವರು ಹೇಳುತ್ತಿದ್ದಾರೆ. ದಯವಿಟ್ಟು ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಬಾಲರಾಜ್:– ನಾನು ಅಲ್ಲಿಯ staff position ಬಗ್ಗೆ ಕೇಳಿದ್ದೆ, ಒಂದು ಮಾರ್ಕೆಟ್ ಅನ್ನು ನಿರ್ವಹಿಸುವುದಕ್ಕೆ ಒಬ್ಬ ಉಪನಿರ್ದೇಶಕರು, ಇಬ್ಬರು ಸಹಾಯಕ ನಿರ್ದೇಶಕರು, ಒಬ್ಬರು ವಿಸ್ತರಣಾಧಿಕಾರಿಗಳೂ, ಹೀಗೆ ನಿಮ್ಮ staff position ನಲ್ಲಿ ಅವರು 64 ಜನರು ಇದ್ದಾರೆ. ನಿಮ್ಮ ಸ್ಟ್ಯಾಫ್ ಪೊಸಿಷನ್ 64 ಜನ ಇದ್ದಾರೆ. ಮೊದಲು 50ರಿಂದ 60,000 ಕೆ.ಜಿ.ಗೂಡುಗಳು ಮಾರುಕಟ್ಟೆಗೆ ಬರುತ್ತಿತ್ತು. ಇವತ್ತು ಆ ಗೂಡು ಐದರಿಂದ 6,000 ಕೆ.ಜಿ.ಗೆ ಬಂದಿದೆ. ಇಷ್ಟು ಕಡಿಮೆ ಪ್ರಮಾಣದಲ್ಲಿ ಬರಬೇಕಾದರೆ 64 ಸ್ಟ್ಯಾಫ್ ಪೊಸಿಷನ್ ಏಕೆ ಬೇಕಾಗಿದೆ? 12 ಜನರಿಗೆ ಸ್ಥಳೀಯರಿಗೆ ಸೆಕ್ಯೂರಿಟಿ ಸಿಬ್ಬಂದಿಯಾಗಿ ನೇಮಕ ಮಾಡಿ ಕೊಂಡಿದ್ದರು. ಕರ್ನಾಟಕ ರಾಜ್ಯದಲ್ಲಿ ಎಲ್ಲ ಕಡೆ ಸಿಬ್ಬಂದಿ ಇದೆ. ಅವರು ಇದ್ದ ರೆಲ್ಲಲ್ಲಾ ರೈತರಿಗೆ ಅನುಕೂಲವಾಗುತ್ತಿತ್ತು. ಇವತ್ತು ಅವರನ್ನು ತೆಗೆದಿದ್ದಾರೆ. ಅದಕ್ಕೆ ಏನೂ ಕ್ರಮ ತೆಗೆದುಕೊಂಡಿಲ್ಲ. ನಾನು ಈಗಾಗಲೇ ಜಂಟಿ ನಿರ್ದೇಶಕರಿಗೆ ಕೇಳಿದೆ, ಏನು ಸಪೋರ್ಟ್ ಮಾಡುವುದಕ್ಕೆ ಆಗುವಂತಹ ಸ್ಥಳೀಯ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೇಮಕ ಮಾಡಿಕೊಡಿ, ಹಿಂದೆ ಇದ್ದುದು ಹಾಗೆಯೇ ಮುಂದು ವರೆಸಿ ಎಂದು ಹೇಳಿದೆ. ಅವರು ಮಾಡಿಲ್ಲ. ಅನೇಕ ಸಣ್ಣ ಪುಟ್ಟ ಕಾರಣಗಳನ್ನು ಹೇಳಿ ತಳ್ಳುತ್ತಾರೆ. ದಯಮಾಡಿ ರೈತರಿಗೆ ನ್ಯಾಯ ಕೊಡಿಸುವುದರಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಷ್ಟು ಕಡಿಮೆ ಪ್ರಮಾಣಕ್ಕೆ ಈ ದುಸ್ಥಿತಿಗೆ ತಲುಪಬೇಕಾದರೆ ಸರ್ಕಾರದ ಸ್ಟ್ಯಾಫ್ ಪೊಸಿಷನ್ ಒಂದು ಇರಬಹದು, ಜೊತೆಗೆ ರೈತರಿಗೆ ಆಗತಕ್ಕಂತಹ ಅನ್ಯಾಯಗಳು ಗೂಂಡಾಗಿರಿಯಿಂದ ಆಗತಕ್ಕಂತಹ ಅನ್ಯಾಯ ಇರಬಹುದು ಇದನ್ನು ಸರಿಪಡಿಸತಕ್ಕಂತಹ ಕ್ರಮಗಳನ್ನು ಮಾನ್ಯ ಸಚಿವರು ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಡಿ.ಆರ್.ಪಾಟೀಲ್:– ಶ್ರೀ ರಾಮರೆಡ್ಡಿಯವರು ರೈತರು ಹಿಂದಿನ ದಿವಸ ಗೂಡು ತೆಗೆದುಕೊಂಡು ಬರುತ್ತಾರೆ ಮರುದಿವಸ ತೂಕ ಆಗುವವರೆಗೆ ಅವರೇ

ದಾರಿ ಕಾಯುತ್ತಾ ಕೂರಬೇಕು, ತಿಂಡಿಗೆ ಸಹಿತ ಹೋಗಲಿಕ್ಕೆ ಅವಕಾಶ ಇಲ್ಲವೆಂದು ಹೇಳಿದರು. ರೈತರು ಗೂಡು ತಂದ ಕೂಡಲೇ ರೆಗ್ಯುಲೇಟೆಡ್ ಮಾರುಕಟ್ಟೆಯಲ್ಲಿ ತೂಕ ಹಾಕಿ ಆ ತೂಕದ ಬಿಲ್ ಅವರಿಗೆ ಕೊಡುವ ಹಾಗೆ ಮಾಡಿ. ರೆಗ್ಯುಲೇಟೆಡ್ ನವರು ನಿಮ್ಮ ಹತ್ತಿರ ಒಂದು ಬಿಲ್ ಇಟ್ಟುಕೊಳ್ಳಿ. ಆ ಮೇಲೆ ಮಾರಾಟ ಆದಾಗ ಅದೇ ತೂಕಕ್ಕೆ ಅವರು ಒಯ್ಯಬೇಕು. ಹಾಗೆ ಫ್ರೀ ವೇವ್‌ಮೆಂಟ್ ಮಾಡಿಸಿ ಇದು ಬಹಳಷ್ಟು ಅನುಕೂಲವಾಗುತ್ತದೆ. ಕಳವು ಕಾಟ ಇವೆಲ್ಲಾ ನಿಲ್ಲುತ್ತದೆ.

ಶ್ರೀ ಸಿ.ಚನ್ನಿಗಪ್ಪ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಬಾಲರಾಜ್‌ರವರ ಪ್ರಶ್ನೆ, ಹಿರಿಯ ಶಾಸಕರ ಪ್ರಶ್ನೆ ಮತ್ತು ಸ್ನೇಹಿತರಾದ ಶ್ರೀ ರಾಮರೆಡ್ಡಿಯವರ ಪ್ರಶ್ನೆ ಬಹಳ ನಿಜ ಇದೆ. ನೀವು ಹೇಳಿದ್ದ ಹಾಗೆ ಮಾರುಕಟ್ಟೆಯಲ್ಲಿ ಗೂಂಡಾಗಿರಿ ಇದೇ ಮಾರುಕಟ್ಟೆಯಲ್ಲಿ ರೈತರಿಗೆ ಬಹಳ ಹಿಂಸೆ ಮಾಡುತ್ತಾರೆ. ತೂಕದಲ್ಲಿ ಮೋಸ ಮಾಡುತ್ತಾರೆ. ಮತ್ತು ಬಿಲ್ ಕೊಡುವುದಕ್ಕೆ ಮೋಸ ಮಾಡುತ್ತಾರೆ ದಲ್ಲಾಳಿಗಳು ಸೇರಿಕೊಳ್ಳುತ್ತಾರೆ. ಜೆಲ್ಲಿ ಗೂಡನ್ನು ಅವರೇ ಹಿಸುಕಿ ಗೂಡನ್ನು ಆಚೆ ಬಿಸಾಕುತ್ತಾರೆ ಎಂದು ಹೇಳಿದಿರಿ ಇವೆಲ್ಲವೂ ನಾನು ನಿಮ್ಮ ಜೊತೆ ಆಗಲೇ ಮಾತನಾಡಿದ್ದೇನೆ. ನಾನು ಸಚಿವನಾದ ಬೆಳಿಗ್ಗೆ ನಾನು ಶಿಡ್ಲಘಟ್ಟ ಮಾರುಕಟ್ಟೆಗೆ ವಿಸಿಟ್ ಮಾಡಿದ್ದೆ. ಅವತ್ತು ಅಲ್ಲಿ ಗೂಂಡಾಗಿರಿ ಇರುವುದು ಆ ಜನರಿಗೆ ನೋಡಿದಾಗ ನನಗನ್ನಿಸಿತು. ಮಾನ್ಯ ಶಾಸಕರು ಅನೇಕ ಸಾರಿ ಕಾಗದಗಳನ್ನು ಕೊಟ್ಟಿದ್ದರು. ದಯಮಾಡಿ ಇಲ್ಲಿ ರಕ್ಷಣೆ ಕೊಡಬೇಕೆಂದು ಹೇಳಿದ್ದರು.

ನಾನು ರೈತರ ಮಗನಾದ ಕಾರಣ ಕೂಡಲೇ ಅಲ್ಲಿಗೆ ಹೋಗಿ ಸ್ಕ್ವಾಡ್ ಸಹಿತ ಹೋಗಿ ಅಲ್ಲಿ ನೋಡಿದಾಗ ಗೂಡು ಹಾಕುವ ಜಾಗಕ್ಕೂ ಕೂಡ 30 ರೂಪಾಯಿ ಕೊಡಬೇಕು. ಆ ಮೇಲೆ ಆ್ಯಕ್ಷನ್ ಮಾಡಿದ ಮೇಲೆ ಸಾವಿರ ರೂಪಾಯಿ ಬಿಲ್ ತೆಗೆದುಕೊಂಡರೆ 100 ರೂಪಾಯಿ, 80 ರೂಪಾಯಿ ಮತ್ತು 60 ರೂಪಾಯಿ ಕಮಿಷನ್ ಕೊಡಬೇಕು. ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಶೌಚಾಲಯ ಇಲ್ಲ. ರೈತರ ಭವನ ಇಲ್ಲ. ಈ ಎಲ್ಲ ಅನೇಕ ನ್ಯೂನತೆಗಳು ಇವು ಇರುವುದು ಸತ್ಯ. ಆದರೆ ಈ ಮೂರು ತಿಂಗಳಲ್ಲಿ ನಾವು ಏನು ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ನಮಗೆ ಮಂತ್ರಿಗಳಾಗಿ ಮಾಡಿದ ಮೇಲೆ ದಯ ಮಾಡಿ ಚಿಂತೆ ಮಾಡಬೇಡಿ ಬಾಲರಾಜ್‌ರವರೇ, ಪ್ರತಿಯೊಂದು ಮಾರುಕಟ್ಟೆಯಲ್ಲಿ ಕೇವಲ 8ರಿಂದ 10 ಮಾರ್ಕೆಟ್ ಬಿಟ್ಟರೆ ಎಲ್ಲಾ ಮಾರುಕಟ್ಟೆಗಳಿಗೂ ನಾನೇ ಸ್ವತಃ ಹೋಗಿ ಅಲ್ಲಿರುವ ಮಾನ್ಯ ಶಾಸಕರುಗಳಿಗೆ ಬಿಜಾಪುರ, ಇರುಬಹುದು, ಬಾಗಲಕೋಟೆ ಇರುಬಹುದು ಮತ್ತು ಕಾರಜೋಳ ಕ್ಷೇತ್ರದಲ್ಲಿ ಕೂಡ ಮಾರುಕಟ್ಟೆಗೆ

ಹೋಗಿದ್ದೆ. ಶ್ರೀರಾಮರೆಡ್ಡಿಯವರ ಪ್ರಶ್ನೆ ತಮ್ಮ ಪ್ರಶ್ನೆ ಮೊದಲು ತೂಕ ಮಾಡಿಸಿ ಒಳಗೆ ಹಾಕಿಕೊಂಡರೆ ತಾಪತ್ರಯ ಇರುವುದಿಲ್ಲ ಎನ್ನುವುದು ಇದು ಸತ್ಯ. ಅದು ಮಾಡಿಸಬೇಕು. ನಮ್ಮಲ್ಲಿ ಮಾರುಕಟ್ಟೆ ವಿಸ್ತೀರ್ಣ ಕಡಿಮೆ ಇದೆ. ಜಾಗ ಕಡಿಮೆ ಇದೆ. ವ್ಯವಸ್ಥೆಗೆ ತಕ್ಕಂತೆ ಹಿಂದೆ ಬಿಲ್ಡಿಂಗ್ ಕೊಟ್ಟಿಲ್ಲ. ಅದಕ್ಕೋಸ್ಕರ ನಾವು ಏನು ಮಾಡಿದ್ದೇವೆ, ಸೆಕ್ಯೂರಿಟಿ ಫೋರ್ಸ್ ಹೆಚ್ಚಿಗೆ ಮಾಡತಕ್ಕಂತಹ ತೀರ್ಮಾನ ತೆಗೆದುಕೊಂಡಿದ್ದೇವೆ, ಅದೇ ರೀತಿ ಗೂಡು ಕಳ್ಳತನ ಮಾಡತಕ್ಕಂತಹ ವರಿಗೆ, ರೌಡಿಸಂ ಮಾಡುವವರಿಗೆ ಪೋಲಿಸ್‌ನವರಿಗೆ ಕಾಗದ ಬರೆದು ಎಲ್ಲ ಜಿಲ್ಲಾ ಎಸ್‌ಪಿಗಳಿಗೆ ಬೆಳಿಗ್ಗೆ ಏಳು ಗಂಟೆಯಿಂದ ಸಾಯಂಕಾಲ ಏಳು ಗಂಟೆಯ ವರೆಗೆ ಐದೈದು ಜನ ಪೊಲೀಸನವರನ್ನು ಕೊಡಬೇಕೆಂದು ನಾನು ಮನವಿ ಮಾಡಿದ್ದೇನೆ. ಆ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳಿಗೂ ನಾನು ಕೇಳಿದ್ದೇನೆ. ಪ್ರತಿಯೊಂದು ಮಾರುಕಟ್ಟೆಗೆ ಪೋಲಿಸ್ ವ್ಯವಸ್ಥೆ ಮಾಡುವ ವ್ಯವಸ್ಥೆ ಮಾಡಿದ್ದೇನೆ. ಅದೇ ರೀತಿ ನಿಮ್ಮ ಮಾರುಕಟ್ಟೆಯಲ್ಲಿ ಮೂರು ಜನ ಅಧಿಕಾರಿಗಳ ಬಗ್ಗೆ ದೂರು ಬಂದಿತ್ತು. 14.03.05 ರಂದು ನಾನು ದೂರು ಸ್ವೀಕಾರ ಮಾಡಿದ್ದೇನೆ. ಮೈಸೂರಿನ ಜೆಡಿಯರವರಿಗೆ ಕರೆಸಿ ಕೂಡಲೇ ಎನ್‌ಕ್ವೈರಿ ಮಾಡಿ ರಿಪೋರ್ಟ್ ಕೊಡಬೇಕೆಂದು ಹೇಳಿದ್ದೇನೆ. ಆದೇಶ ಮಾಡಿದ್ದೇನೆ. ಯಾರನ್ನು ಸೇವ್?? ಮಾಡುವುದಿಲ್ಲ. ಈಗಾಗಲೇ 9 ಜನ ಕಳ್ಳ ಅಧಿಕಾರಿಗಳು ಯಾರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇನೆ. ಉತ್ತಮರಾದವರಿಗೆ ನಮ್ಮ ಇಲಾಖೆ ಅವಾರ್ಡ್ ಕೊಡುತ್ತದೆ. ಆದರೆ ಕಳ್ಳರಿಗೆ ನೀವು ಹೇಳಿದೆ ಹಾಗೆ ಶಿಕ್ಷೆ ಮಾಡದೆ ಇರುವುದಿಲ್ಲ. ಆ 9 ಜನರಿಗೆ ಈಗಾಗಲೇ ಸಸ್ಪೆಂಡ್ ಮಾಡಿಸಿದ್ದೇನೆ. ಅವರಿಗೆ ಯಾವ ಕಾರಣಕ್ಕೆ ವಾಪಸ್ ಬರುವುದಕ್ಕೆ ಅವಕಾಶವಿಲ್ಲ. ಎನ್‌ಕ್ವೈರಿ ಮಾಡಿಸಿ ಅವರಿಗೆ ಡಿಸ್‌ಮಿಸ್ ಮಾಡುವುದಕ್ಕೆ ಸರ್ಕಾರ ನ್ಯಾಯಯುತವಾದ ಕ್ರಮ ತೆಗೆದು ಕೊಳ್ಳುತ್ತದೆ ಎಂದು ದಯಮಾಡಿ ತಾವು ತಿಳಿದುಕೊಳ್ಳಬೇಕು. ಅದೇ ರೀತಿ ಮಾನ್ಯ ಬಾಲರಾಜ್‌ರವರ ಕಳಕಳಿ, ಶ್ರೀ ರಾಮರೆಡ್ಡಿಯವರ ಕೋಲಾರ ಆಗಬಹುದು, ಕೊಳ್ಳೇಗಾಲ ಆಗ ಬಹುದು, ಮೈಸೂರು ಆಗಬಹುದು, ಉತ್ತಮ ರೈತರು ಇದ್ದಾರೆ. ಆದ್ದರಿಂದ ಇವತ್ತು ಆರ್ಥಿಕವಾಗಿ ಅವಲಂಭಿಸಿರತಕ್ಕಂತ ವಿದ್ಯಾವಂತ ಗ್ರ್ಯಾಜುಯೇಟ್ಸ್ ಇದ್ದರೆ ಇಂತಹ ದೂರು ಬರಬೇಕಾದರೆ ಶಾಸಕರು ಮತ್ತು ರೈತರು ಒಟ್ಟಿಗೆ ಸಮನ್ವಯ ಸಮಿತಿ ಮಾಡಿಕೊಂಡು ಆ ಮಾರುಕಟ್ಟೆ ಒಳಗಡೆ ಒಂದು ಸಮಿತಿ ಮಾಡಬೇಕಾಗಿದೆ. ಆ ಸಮಿತಿ ನಿಮ್ಮ ಅಧ್ಯಕ್ಷತೆ ಒಳಗೆ ಮಾಡಿಸುತ್ತೇವೆ. ಎಲ್ಲ ಮಾನ್ಯ ಶಾಸಕರು ಎಲ್ಲೆಲ್ಲಿ ಇದ್ದಾರೆ ಆ ಕ್ಷೇತ್ರದಲ್ಲಿ ಸಮನ್ವಯ ಸಮಿತಿ ಮಾಡಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ಉತ್ತಮವಾದ ರೈತರು ವಿದ್ಯಾವಂತ ರೈತರನ್ನು ಆ ಕಮಿಟಿಯ ಸದಸ್ಯರನ್ನಾಗಿ ಮಾಡಿ ಆ ಸಮಿತಿ ಮುಂದೆ ಆಗತಕ್ಕಂತಹ ಅನ್ಯಾಯವನ್ನು ಸರ್ಕಾರಕ್ಕೆ ಕೂಡಲೇ ವರದಿ ಮಾಡಬೇಕು. ತಪ್ಪು ಮಾಡುವ ಅಧಿಕಾರಿಗಳ ಮೇಲೆ ಕೂಡಲೇ ಕ್ರಮ ತೆಗೆದುಕೊಂಡು ನಮಗೆ ವಿಷಯ

ತಿಳಿಸತಕ್ಕಂತಹ ಇಮ್ಮಿಡಿಯಟ್ ಆ್ಯಕ್ಷನ್ ತೆಗೆದುಕೊಳ್ಳತಕ್ಕಂತಹ ಕೆಲಸವನ್ನು ಈಗಾಗಲೇ ಮಾಡಿಸಿದ್ದೇನೆ. ಅದೇ ರೀತಿ ನಮ್ಮ ಹಿರಿಯ ಶಾಸಕರು ಹೇಳಿದ ರೀತಿಯಲ್ಲಿ ಅದನ್ನು ಯೋಜನೆ ಮಾಡುತ್ತಿದ್ದೇವೆ. ಗೂಡು ಬಂದ ತಕ್ಷಣ ರಾತ್ರಿ ತೂಕ ಮಾಡಿಸಿ ಗೂಡನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಬೆಳಿಗ್ಗೆ ಆ್ಯಕ್ಷನ್ ಮಾಡಿಸಿ ಏನು ಬಿಡ್ ಹೋಗುತ್ತದೆ ಆ ಬಿಡ್ಡಿನ ಬಿಲ್ ಪಾವತಿ ಮಾಡುವ ವ್ಯವಸ್ಥೆ ಮಾಡಿಸಿಕೊಡುತ್ತೇನೆ.

ಅಧ್ಯಕ್ಷರು: ಬಸವರಾಜರಾಯರೆಡ್ಡಿ, ಎಸ್.ಅಂಗಾರ, ಬಹಳಷ್ಟು ಹೇಳಿದ್ದಾರೆ. ದಯಮಾಡಿ ಮೂರು ಜನ ಉಪ ಪ್ರಶ್ನೆಗಳನ್ನು ಕೇಳಿದ್ದೀರಿ. ಮಲ್ಲಿಕಾರ್ಜುನ, ಸಿದ್ದರಾಮಪ್ಪ, ಬಾಲರಾಜರವರೇ ನೀವು ಕೇಳಿದ ತಕ್ಷಣ ಎಲ್ಲರೂ ಕೇಳುತ್ತಾರೆ. ಎರಡು ಉಪ ಪ್ರಶ್ನೆ ಕೇಳಬಹುದು. ಮೂರು ಜನ ಕೇಳಿದ್ದೀರಿ. ವಿವರವಾಗಿ ಉತ್ತರ ಹೇಳಿದ್ದಾರೆ. ಮತ್ತೆ ಏನು ಕೇಳುತ್ತೀರಿ? ಒಂದು ನಿಮಿಷ ಕೇಳಿ. ಈ ತರಹ ಆದರೆ ಪ್ರಶ್ನೋತ್ತರ ಮುಗಿಸುವುದು ಹೇಗೆ ಹೇಳಿ.

ಶ್ರೀ ಎನ್.ಬಾಲರಾಜ್: ಮಾನ್ಯ ಅಧ್ಯಕ್ಷರೆ, ಇದನ್ನು ಯಾವುದಾದರೂ ಒಂದು ನಿಯಮಗಳ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ, ಅವಕಾಶ ಕೊಡಿ. ರೀಲರ್‌ಗಳು ಲೈಸನ್ಸ್ ತೆಗೆದುಕೊಳ್ಳುವ ಸಂದರ್ಭದಲ್ಲಿ ಅವರಿಗೆ ಯಾವುದೇ ನೀತಿ ನಿಯಮಗಳು ಇಲ್ಲ ಗ್ರೇನೇಜ್ ಮಾಡಬೇಕೆಂದರೆ, ಅವರಿಗೆ ಆರು ತಿಂಗಳ ಕಾಲ ಟ್ರೈನಿಂಗ್ ಮಾಡಿ ಸರ್ಟಿಫಿಕೇಟ್ ಇದ್ದರೆ ಮಾತ್ರ ಲೈಸನ್ಸ್ ಕೊಡುತ್ತಾರೆ. ಆದರೆ ರೀಲರ್‌ಗಳಿಗೆ ಯಾವ ಮಾನದಂಡ ಇದೆ? ಮೊನ್ನೆ ಯಾರೋ ಒಬ್ಬ ಯಾವುದೋ ಒಂದು ರೀಲಿಂಗ್ ಮೆಷಿನ್ ತೋರಿಸಿ ಒಂದು ಲೈಸನ್ಸ್ ತೆಗೆದು ಕೊಂಡು ಬಿಟ್ಟಿರುತ್ತಾರೆ. ಗೂಂಡಾಗಿರಿ ಮಾಡುವುದಕ್ಕೋಸ್ಕರ ಅದು ನಿಜವಾಗಿ ನಡೆಯುತ್ತಿದೆ ಇಲ್ಲವೆಂದು ಪ್ರಶ್ನೆ ಮಾಡದೆ ಇದ್ದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳದೆ ಇದ್ದರೆ ನಾವು ಏನು ಸಾಧನೆ ಮಾಡಿದ ಹಾಗಾಗುತ್ತದೆ? ತಾವು ದಯಮಾಡಿ ರೀಲರ್‌ಗಳಿಗೆ ಕೂಡ ಸರಿಯಾಗಿ ನ್ಯಾಯಯುತವಾಗಿ ಮಾಡತಕ್ಕಂತಹವರಿಗೆ ಆರು ತಿಂಗಳುಗಳಿಗೆ ಒಂದು ಸಾರಿ, ಒಂದು ವರ್ಷಕ್ಕೆ ಒಂದು ಸಾರಿ ಅದನ್ನು ಪರೀಕ್ಷೆ ಮಾಡಿ ಅವರು ನಿಜವಾಗಿ ನಡೆಸಿದರೆ ಮಾತ್ರ ಲೈಸನ್ಸ್ ಮುಂದುವರೆಸಬೇಕು. ಇಲ್ಲದಿದ್ದರೆ ಬೇಡ. ಎಂದು ತಮಗೆ ತಿಳಿಸುತ್ತೇನೆ. ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಬಾಲರಾಜ್‌ರವರ ಪ್ರಶ್ನೆ ರೀಲರ್‌ಗಳಿಗೆ ನಾವು ರೇಷ್ಮೆ ಇಲಾಖೆ ಕಾನೂನು ಅಡಿಯಲ್ಲಿ 1959–60ನೇ ಇಸವಿಯಲ್ಲಿ

ಏನು ಕಾನೂನು ಮಾಡಿದ್ದೇವೆ, ಪ್ರತಿಯೊಬ್ಬ ರೀಲರ್ ಲೈಸನ್ಸ್ ತೆಗೆದುಕೊಳ್ಳಬೇಕು. ಮಾರುಕಟ್ಟೆಗೆ ಬರಬೇಕಾದರೆ ಕಾರ್ಡ್ ಕೊಡಬೇಕು. ಅದರಲ್ಲಿ ಕೂಡ ಕೆಲವರು ಮೋಸ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಅಂತಹವರಿಗೆ ಕ್ಯಾನ್ಸಲ್ ಮಾಡಿ ಐಡೆಂಟಿಫಿಕೇಷನ್ ಕಾರ್ಡ್ ಇಲ್ಲದೆ ಒಳಗೆ ಬಿಡದೆ ಇರುವಂತಹ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದೇನೆ ಇನ್ನೂ ಮುಂದೆ ಕೂಡ ತಾವು ಏನು ಸೆಕ್ಯೂರಿಟಿ ಕೇಳಿದ್ದೀರಿ, ಉತ್ತಮವಾದ ಸೆಕ್ಯೂರಿಟಿ ಕೇಳಿದ್ದೀರಿ, ಉತ್ತಮವಾದ ಸೆಕ್ಯುರಿಟಿ ಹಾಕಿ ಮಾಲುಗಳು ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಚೆಕ್ ಮಾಡಿ ಒಳಗೆ ಬಿಡತಕ್ಕಂತಹ ಕೆಲಸ ಮಾಡುತ್ತೇನೆ.

ಅಧ್ಯಕ್ಷರು: ಮಲ್ಲಿಕಾರ್ಜುನ ಸಿದ್ದರಾಮಪ್ಪ ಕೂಬ, ಡಿ.ಆರ್.ಪಾಟೀಲ್ ಡಿ.ಆರ್.ಪಾಟೀಲರೇ ತಮ್ಮ ಪ್ರಶ್ನೆ ಸಹಕಾರಿ ಇಲಾಖೆಗೆ ವರ್ಗಾವಣೆ ಆಗಿದೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಅದು ಸಮಾಜ ಕಲ್ಯಾಣ ಇಲಾಖೆ ಸಚಿವರು ಉತ್ತರ ಕೊಡಬೇಕಾಗುತ್ತದೆ. ಅನುದಾನಕ ಸಮಾಜ ಕಲ್ಯಾಣ ಇಲಾಖೆಗೆ ಬರುತ್ತದೆ. ಅವರು ಬಿಡುಗಡೆ ಮಾಡಬೇಕಾಗುತ್ತದೆ. ಅದನ್ನು ಏಕೆ ಸಹಕಾರಿ ಇಲಾಖೆಗೆ ಅವರು ವರ್ಗಾವಣೆ ಮಾಡಿದರು?

ಅಧ್ಯಕ್ಷರು: ವರ್ಗಾವಣೆ ಆಗಿದೆ. ಅದು ಕೇಳಿ ನಾಳೆ ಉತ್ತರ ಕೊಡಿ ಎಂದು ಹೇಳೋಣ.

ಶ್ರೀ ಡಿ.ಆರ್.ಪಾಟೀಲ್: ಪ್ರಶ್ನೆಗೆ ಈಗ ತಾವು ಉತ್ತರ ಕೊಡುತ್ತೀರಾ?

ಡಾ.ವೈ.ನಾಗಪ್ಪ: ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಸಚಿವರ ಜೊತೆ ಮಾತನಾಡಿ ಉತ್ತರ ಒದಗಿಸುತ್ತೇನೆ.

ಅಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ: ಶೆಡ್ಯೂಲ್ ಬ್ಯಾಂಕ್‌ನವರಿಗೆ ಬಿಎಲ್‌ಡಿ ಬ್ಯಾಂಕ್, ಟಿಎಪಿಸಿಎಂಎಸ್ ವಿ. ಎಸ್‌ಎಸ್‌ಎನ್ ಷೇರ್‌ಗೆ ಸಬ್ಸಿಡಿ ರಿಲೀಸ್ ಮಾಡಿಕೊಡಿ ಎಂದು ಕೊಟ್ಟಿರುವುದು. ತಾವು ಈ ಕೋ – ಆಪರೇಟಿವ್ ಮಂತ್ರಿಗಳ ಹತ್ತಿರ ಏಕೆ ಮಾತನಾಡುತ್ತೀರಿ? ನಿಮ್ಮ ಇಲಾಖೆಗೆ ಆ ಬ್ಯಾಂಕ್‌ಗೆ ಹಣ ತುಂಬ ಬೇಕು. ಎಸ್‌ಸಿಎಸ್‌ಟಿ ಪಾಪುಲೇಷನ್‌ಗೆ ತುಂಬಿ ಕೊಡುತ್ತೇವೆಂದು ಹೇಳಿ. ಇಲ್ಲಿ ದೋಷ ಏನಾಗಿದೆ ಎಂದರೆ, ಮೊದಲು ತುಂಬಿಸಿದ್ದೀರಿ, ಕೆಲವು ಬ್ಯಾಂಕುಗಳು ಷೇರ್ ಅಮೌಂಟ್ ಎನ್‌ಹ್ಯಾನ್ಸ್ ಮಾಡಿದ್ದಾರೆ. ಆ ವ್ಯತ್ಯಾಸ ಕಟ್ಟದೆ ಯಾರು ಎಸ್‌ಸಿ ಎಸ್‌ಟಿ ಜನಾಂಗ ಷೇರ್ ಹೋಲ್ಡರ್ಸ್ ಆಗುವ ಹಾಗಿಲ್ಲ. ಗವರ್ನಮೆಂಟ್‌ನಲ್ಲಿ ಷೇರ್ ಹಾಕಿದ್ದಕ್ಕೆ ತುಂಬಿ ಕೊಡುತ್ತೇವೆ ಎಂದು ಹೇಳಿ, ಅವರು ಏಕೆ ಬೇಕು ಇದಕ್ಕೆ?

ಅಧ್ಯಕ್ಷರು: ಇದನ್ನು ತಡೆಹಿಡಿದಿದ್ದೇನೆ. ನಾಳೆ ನೀವು ಸಂಬಂಧಪಟ್ಟ